ಅಸಲ ದಾವಾ ನಂ.256/2024

**ಮೆ:: ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಗೋಕಾಕ ಇವರ ನ್ಯಾಯಾಲಯದಲ್ಲಿ ಗೋಕಾಕ**

1] ಶ್ರೀಮತಿ. ಸುಧಾ @ ಸುಧಾರಾಣಿ ಕೊಂ. ಹಣಮಂತ ದೊಡಮನಿ @ ಹರಿಜನ @ ಹೊಲೇರ ಹಾಗೂ ಇನ್ನೊಬ್ಬರು

......ವಾದಿಯರು

// ವಿರುದ್ಧ //

1] ಶ್ರೀಮತಿ. ರುಕ್ಮನಿ ತನ್ನಷ್ಟಕ್ಕೆ ತಾನೆ ಕೊಂ. ಹಣಮಂತ ದೊಡಮನಿ @ ಹರಿಜನ @ ಹೊಲೇರ ಹಾಗೂ ಇತರರು

........ಪ್ರತಿವಾದಿಯರು

NOTARY ★ Sri D.P. GUDAJ Mudalagi & Gokak Taluk Dist:Belagavi-Karnataka Reg.No. 12473/2017 Exp. Date: 09/01/2027 ★ GOVERNMENT OF INDIA

**<u>ಪಿ.ಡಬ್ಲ್ಯೂ-1 ಇವರ ಹೆಚ್ಚಿನ ಮುಖ್ಯ ಸಾಕ್ಷಿ ವಿಚಾರಣೆಗಾಗಿ ಪ್ರಮಾಣ ಪತ್ರ</u>**

| | |
|---|---|
| ಹೆಸರು | : ಸುಧಾ @ ಸುಧಾರಾಣಿ ದೊಡಮನಿ @ ಹರಿಜನ @ ಹೊಲೇರ |
| ಗಂಡನ ಹೆಸರು | : ಹಣಮಂತ ದೊಡಮನಿ @ ಹರಿಜನ @ ಹೊಲೇರ |
| ವಯಸ್ಸು | : 26 ವರ್ಷ |
| ಉದ್ಯೋಗ | : ಒಕ್ಕಲುತನ /ಮನೆಗೆಲಸ |
| ಸಾಕೀನ | : ಬಗರನಾಳ- ಬೆಟಗೇರಿ, ತಾ: ಗೋಕಾಕ, |

Copy received
(Smt S. Shiseroth)
Adv for defts.

ಈ ಹೊತ್ತು ಮುಕ್ಕಾಂ ಗೋಕಾಕದಲ್ಲಿ ಸತ್ಯ ಪ್ರತಿಜ್ಞೇಯ ಮೇರೆಗೆ ಮಾಡಿದ ಸಾಕ್ಷಿ ಪ್ರಮಾಣ ಪತ್ರ ಏನೆಂದರೆ:-

1) ಈ ದಾವೆದಲ್ಲಿ ನಾನು ವಾದಿ ನಂ.1 ಇರುತ್ತೇನೆ. ನನಗೆ ಸದರಿ ದಾವೆದ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ನಾನು ಈಗಾಗಲೆ ಸದರಿ ದಾವೆದಲ್ಲಿ ನನ್ನ ಸಾಕ್ಷಿ ವಿಚಾರಣೆಯನ್ನು ಸಲ್ಲಿಸಿದ್ದು, ಸದರಿ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಯಾವತ್ತೂ ಮಜಕೂರುಗಳನ್ನು ಈ ಹೆಚ್ಚಿನ ಸಾಕ್ಷಿ ವಿಚಾರಣೆ ಪ್ರಮಾಣ ಪತ್ರದ ಒಂದು ಭಾಗ ಅಂತಾ ಪರಿಗಣಿಸತಕ್ಕದ್ದು.

S. M. DOdamani

No of Correction

2) ನಾನು ನನ್ನ ವಾದ ಪತ್ರದಲ್ಲಿ ಯಾವುದೆ ವಿಷಯಗಳನ್ನು ಬಚ್ಚಿಟ್ಟಿರುವುದಿಲ್ಲ. ಪ್ರತಿವಾದಿಯರು ತಮ್ಮ ಪ್ರತಿವಾದ ಪತ್ರದಲ್ಲಿ ನಾನು ಹಣಮಂತ ಇತನ ಕಾನೂನುಬದ್ಧ ಹೆಂಡತಿ ಇರುವುದಿಲ್ಲ ಮತ್ತು ನನ್ನ ಹಾಗೂ ಆತನ ಲಗ್ನವು ನಮ್ಮ ಜಾತಿ ರಿವಾಜ ಪ್ರಕಾರ ಆಗಿರುವುದಿಲ್ಲ ಅಂತಾ ಪ್ರತಿವಾದ ಪತ್ರದಲ್ಲಿ ಹೇಳಿದ್ದು ಇರುತ್ತದೆ. ಆದರೆ ನನ್ನ ಲಗ್ನವು ಹಣಮಂತ ಇತನ ಜೊತೆಗೆ ಆದ ನಂತರ ನಾನು ಬಾಳ್ವೆ ಮಾಡಲು ನನ್ನ ಗಂಡನ ಮನೆಗೆ ಹೋಗಿದ್ದು ಇರುತ್ತದೆ, ನಮ್ಮಿಬ್ಬರ ವೈವಾಹಿಕ ಜೀವನದಿಂದ ಹರ್ಷಿತ ಅಂತಾ ಗಂಡು ಮಗು ಜನಿಸಿದ್ದು ಇರುತ್ತದೆ. ಆದರೆ ಪ್ರತಿವಾದಿಯರು ನನಗೆ ಪಾಲು ಸಿಗಬಾರದೆಂಬ ದುರುದ್ದೇಶದಿಂದ ತನ್ನ ಪ್ರತಿವಾದ ಪತ್ರದಲ್ಲಿ ನಾನು ಹಣಮಂತ ಹೆಂಡತಿ ಮತ್ತು ಹರ್ಷಿತ ಇತನು ಮಗ ಇರುತ್ತಾನೆ ಅಂತಾ ಗೋತ್ತಿದ್ದರೂ ಕೂಡಾ ಈ ವಿಷಯವನ್ನು ಬಚ್ಚಿಟ್ಟಿರುತ್ತಾರೆ.

3) ಪ್ರತಿವಾದಿ ನಂ.1-ರುಕ್ಮಿಣಿ ಇವರು ಹಣಮಂತ ಇತನ ಕಾನೂನುಬದ್ಧ ಹೆಂಡತಿ ಇರುವುದಿಲ್ಲ ಅದರಂತೆ ಪ್ರತಿವಾದಿ ನಂ.2-ಪ್ರಣವಿ, ಪ್ರತಿವಾದಿ ನಂ.3-ಏಕತಾ ಇವರು ಕಾನೂನು ಬದ್ಧ ಮಕ್ಕಳು ಇರುವುದಿಲ್ಲ. ಸಮಾಜವು ನನ್ನನ್ನು ಹಾಗೂ ಹಣಮಂತ ಇತನನ್ನು ಗಂಡ ಹೆಂಡತಿ ಅಂತಾ ಗುರ್ತಿಸುತ್ತಾರೆ. ನಾನು ಮತ್ತು ನನ್ನ ಗಂಡ ಹಣಮಂತ ಗೋಕಾಕದಲ್ಲಿ ವಾಸಮಾಡುತ್ತಿದ್ದೇವು, ಆತನು ಆತ್ಮಹತ್ಯೆ ಮಾಡಿಕೊಂಡ ನಂತರ ಈ ವಿಷಯವನ್ನು ಸಂಬಂಧಪಟ್ಟ ಪೋಲಿಸ ಅಧಿಕಾರಿಗಳಿಗೆ ತಿಳಿಸಿದ್ದೇನು. ನಂತರ ಎಲ್ಲಾ ವಿಧಾನಗಳು ಮುಗಿದ ನಂತರ ನಮ್ಮ ಜಾತಿ ರಿವಾಜ ಪ್ರಕಾರ ಸಂಬಂಧಿಕರು ಎಲ್ಲರೂ ಕೂಡಿ ಮರಣೋತ್ತರ ಕ್ರಿಯೇಯನ್ನು ಮಾಡಿರುತ್ತೇವೆ.

4) ನನ್ನ ಗಂಡನು ತೀರಿಕೊಂಡ ನಂತರ ಡಿಕ್ರಿಯ ಪ್ರಕಾರ ಆತನ ಪಾಲಿಗೆ ಬಂದ ಆಸ್ತಿಗಳನ್ನು ನಾನು ಮತ್ತು ನನ್ನ ಮಗ ಇಬ್ಬರು ನಮ್ಮ ಕಬ್ಜಾ ವಹಿವಾಟಿಯಲ್ಲಿ ಇಟ್ಟುಕೊಂಡು ವಹಿವಾಟ ಉಪಭೋಗ ಮಾಡುತ್ತಾ

No of Correction

S. H. Dodamani

ಬಂದಿರುತ್ತೇವೆ. ದಾವೆದ ಆಸ್ತಿಗಳ ಉತಾರದಲ್ಲಿ ಈಗಾಗಲೆ ಮಾನ್ಯ ಕಂದಾಯ ಅಧಿಕಾರಿಗಳ ಆದೇಶದ ಪ್ರಕಾರ ದಾಖಲಾಗಿರುತ್ತದೆ. ದಾವೆದ ಆಸ್ತಿಗೆ ಸಂಬಂಧಿಸಿದಂತೆ ಭೂಮಿ ಕರ ಇತ್ಯಾದಿಗಳನ್ನು ತುಂಬುತ್ತಾ ಬಂದಿರುತ್ತೇವೆ.

5) ನಾನು ಮೃತ ಹಣಮಂತ ಇತನ ಕಾನೂನಬದ್ಧ ಹೆಂಡತಿ ಇದ್ದರೂ ಕೂಡಾ ಪ್ರತಿವಾದಿಯು ತನ್ನ ಲಾಭಗೋಸ್ಕರವಾಗಿ ಸುಳ್ಳು ವಿಷಯಗಳನ್ನು ಪ್ರಸ್ತಾಪಿಸಿ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು ನಾನು ಅವುಗಳನ್ನು ಬಲವಾಗಿ ಅಲ್ಲಗಳೆಯುತ್ತೇನೆ. ನನಗೆ ಸಂಬಂಧಿಸಿದ ಹೊಲದ ಉತಾರಗಳಲ್ಲಿ ಆಧಾರ ಕಾರ್ಡ, ರೇಷನ ಕಾರ್ಡ ಹಾಗೂ ನನ್ನ ಮಗನ ಜನನ ದಾಖಲಾತಿಗಳಲ್ಲಿ ನನ್ನ ಹೆಸರು ಸುಧಾ @ ಸುಧಾರಾಣಿ ಗಂಡ ಹಣಮಂತ ದೊಡಮನಿ @ ಹೊಲೇರ @ ಹರಿಜನ ಅಂತಾ ದಾಖಲ ಇರುತ್ತದೆ.

ಈ ಮೇಲೆ ಹೇಳಿದ ಎಲ್ಲಾ ಕಾರಣಗಳಿಂದ ನಾನು ಮಾಡಿದ ದಾವೆಯನ್ನು ಡಿಕ್ರಿ ಮಾಡಬೇಕಾಗಿ ವಿನಂತಿ ಅಂತಾ ಮಾಡಿದ ಹೆಚ್ಚಿನ ಸಾಕ್ಷಿ ವಿಚಾರಣೆ ಪ್ರಮಾಣ ಪತ್ರ.

ಸ್ಥಳ: ಗೋಕಾಕ,
ದಿನಾಂಕ: 02/07/2026

S.H. Dodamani
ಶಪಥವಿಧಿಗಾರಳು

ಈ ಮೇಲೆ ಬರೆದ ಯಾವತ್ತೂ ಮಜಕೂರುಗಳು ನನ್ನ ಸ್ವಂತ ಮಾಹಿತಿ ಮೇರೆಗೆ ಹೇಳಿ ಬರೆಯಿಸಿದ್ದು ಅವು ಸಂಪೂರ್ಣ ನಿಜವಿರುತ್ತವೆ.

ಸ್ಥಳ: ಗೋಕಾಕ,
ದಿನಾಂಕ: 02/07/2026
// ಸದರಿಯವರ ಪರಿಚಯವಿದೆ//

S. H. Dodamani
ಶಪಥವಿಧಿಗಾರಳು

(ಬಿ.ಕೆ. ಜೋಶಿ)
ವಕೀಲರು – ಗೋಕಾಕ

NOTARY
Sri D.P. GUDAJ
Mudalagi & Gokak Taluk
Dist:Belagavi-Karnataka
Reg.No. 12473/2017
Exp. Date: 09/01/2027
GOVERNMENT OF INDIA

SWORN TO BEFORE ME
D. P. GUDAJ B.A.LL.B.(Spl.)
ADVOCATE & NOTARY
GOVERNMENT OF INDIA
GOKAK TALUKA

02 JUL 2026

No of Correction